ಈ) 1995-96ನೇ ಸಾಲಿನಲ್ಲಿ ದಿನಾಂಕ 10-9-1995ರವರೆಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಒಟ್ಟು 30,175 ವಿದ್ಯಾರ್ಥಿಗಳನ್ನು ನೊಂದಾಯಿಸಲಾಗಿರುತ್ತದೆ.

ಉ) ಇಲ್ಲ

ಊ) ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆಗೆ ತಿದ್ದುಪಡಿ

2710 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ ಪ್ರಕಾರ ಮರಕಡಿಯಲು ಅನುಮತಿ ಪಡೆದುಕೊಳ್ಳುವುದು ಕಡ್ಡಾಯವಲ್ಲವೇ?*

ಆ) *ಹಾಗಿದ್ದಲ್ಲಿ ಕರ್ನಾಟಕ ವಿದ್ಯುತ್ ಮಂಡಳಿಯವರು ಯಾವುದೇ ಮುನ್ಸೂಚನೆ ಇಲ್ಲದೇ ದೊಡ್ಡ ಮರಗಳನ್ನು ವಿದ್ಯುತ್ ಲೈನಿಗೆ ಅಡ್ಡ ಮಾಡುವ ನೆಪದಲ್ಲಿ ಕಡಿದು ಹಾಕುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ ಇದನ್ನು ತಪ್ಪಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?*

ಈ) *ಈ ಮರ ಕಡಿಯಲು ಬರತಕ್ಕ ಅರ್ಜಿಗಳನ್ನು ನಿಗದಿತ ಕಾಲದಲ್ಲಿ ವಿಲೇವಾರಿ ಮಾಡದಿದ್ದಲ್ಲಿ ಅನುಮತಿ ನೀಡಲಾಗಿದೆ ಎಂದು ಸೂಚಿಸುವ ಬಗ್ಗೆ ಈ ಕಾಯಿದೆಗೆ ತಿದ್ದುಪಡಿ ತರಲು ಸರ್ಕಾರ ಉದ್ದೇಶಿಸಿದೆಯೇ?*

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಹೌದು

ಆ) ಕರ್ನಾಟಕ ವಿದ್ಯುತ್ ಮಂಡಳಿ ವಿಶೇಷ ಕಾಯಿದೆಯನ್ವಯ ಮರಗಳ ಕೊಂಬೆಗಳನ್ನು ವಿದ್ಯುಚ್ಛಕ್ತಿ ಲೈನಿಗೆ ಅಡ್ಡ ಬಂದಲ್ಲಿ ಕಡಿಯಲು ಅನುಮತಿ ಇದೆ. ವಿನಾಕಾರಣ ಮರಗಳನ್ನು ಕಡಿಯದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲು ಕ್ರಮವನ್ನು ಕೈಗೊಳ್ಳಲಾಗುವುದು.

ಇ) ವಿನಾಕಾರಣ ಮರದ ಕೊಂಬೆಗಳನ್ನು ಕಡಿಯುವ ನೆಪದಲ್ಲಿ ಮರಗಳನ್ನು ಕರ್ನಾಟಕ ವಿದ್ಯುತ್ ಮಂಡಳಿಯವರು ಕಡಿದಿರುವ ಬಗ್ಗೆ ಅರಣ್ಯ ಇಲಾಖೆ ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಜಂಟಿ ಸಮಾಲೋಚನೆ ನಡೆಸಿ ಇಂತಹ ಸಂದರ್ಭಗಳಲ್ಲಿ ಮರಗಳ ಕೊಂಬೆಗಳನ್ನು ಕಡಿಯುವುದು ಅರಣ್ಯ ಇಲಾಖೆಗೆ ವಹಿಸಿ ಅದಕ್ಕೆ ಅವಶ್ಯಕವಾದ ಸಲಕರಣೆಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಒದಗಿಸಬೇಕೆಂದು ತೀರ್ಮಾನ ತೆಗೆದುಕೊಳ್ಳಲಾಗಿದೆ.

ಈ) ಸಾಮಾನ್ಯವಾಗಿ ನಿಗದಿತ ಕಾಲದೊಳಗೆ ಅರ್ಜಿಗಳನ್ನು ವಿಲೇವಾರಿ ಮಾಡಲಾಗುತ್ತಿದೆ. ಆದರೂ ಕೆಲವೊಂದು ಪ್ರಕರಣಗಳಲ್ಲಿ ಇದೇ ವೃಕ್ಷ ಸಂರಕ್ಷಣಾ ಕಾಯ್ದೆಯ ಸೂಚನೆಗಳನ್ವಯ ಕಡಿಯಲಿರುವ ಮರಗಳ ಅಳತೆ ಜಮೀನಿನ ಸರ್ವೆ ನಂಬರ್, ಸರ್ವೆ ನಕ್ಷೆ, ವಗೈರೆ ನೀಡದೇ ಇವುಗಳನ್ನು ತನಿಖೆ ಮಾಡಿ ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡದಿದ್ದಲ್ಲಿ ಅನುಮತಿ ನೀಡಲಾಗಿದೆ ಎಂದು ಭಾವಿಸುವ ಅವಕಾಶವಿರುವುದರಿಂದ ಈ ಕಾಯ್ದೆಗೆ ತಿದ್ದುಪಡಿ ತರಲು ಪರಿಶೀಲಿಸಲಾಗುತ್ತದೆ.

ದ.ಕನ್ನಡ ಜಿಲ್ಲೆಯ ಶಿಕ್ಷಕರ ತರಬೇತಿ ಸಂಸ್ಥೆ

2029 - ಶ್ರೀ ಕುಂಬಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಲ್ಪ ಸಂಖ್ಯಾತರು ನಡೆಸುತ್ತಿರುವ ಶಿಕ್ಷಕ ತರಬೇತಿ ಸಂಸ್ಥೆಗಳೆಷ್ಟು?*

ಅ) ಅವುಗಳಲ್ಲಿ ಅನುದಾನಿತ ಸಂಸ್ಥೆಗಳೆಷ್ಟು, ಅನುದಾನ ರಹಿತ ಸಂಸ್ಥೆಗಳೆಷ್ಟು?

ಇ) ಕಳೆದ ಐದು ಶೈಕ್ಷಣಿಕ ವರ್ಷಗಳಿಂದ (1990-91, 1991-92, 1992-93, 1993-94, 1994-95) ಸದರಿ ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ಪಡೆದ ಅಲ್ಪ ಸಂಖ್ಯಾತರೆಷ್ಟು? ಉಳಿದ ಜಾತಿವಾರು ಶಿಕ್ಷಣಾರ್ಥಿಗಳ ಸಂಖ್ಯೆ ಎಷ್ಟು, (ವರ್ಷವಾರು ಜಾತಿವಾರು ವಿವರ ಒದಗಿಸುವುದು)

ಈ) ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ನಂತರ ಆ ಶಿಕ್ಷಕ ತರಬೇತಿ ಸಂಸ್ಥೆಗಳು ಸರಕಾರದ ಹೊಸ ನೀತಿಯನ್ನು ಪಾಲಿಸುತ್ತಿದೆಯೇ?

ಉ) ಹಾಗಿದ್ದಲ್ಲಿ 1995-96ರ ಶೈಕ್ಷಣಿಕ ಸಾಲಿನಲ್ಲಿ ಶಿಕ್ಷಣಾರ್ಥಿಗಳ ಸಂಖ್ಯೆ ಎಷ್ಟು? (ವಿವರ ಒದಗಿಸಿ) ಅಲ್ಪ ಸಂಖ್ಯಾತ ವಿದ್ಯಾರ್ಥಿಗಳ ಹಾಗೂ ಬಹು ಸಂಖ್ಯಾತ ವಿದ್ಯಾರ್ಥಿಗಳ ವಿವರ ನೀಡುವುದು)

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಅ) 03

ಆ) ಅನುದಾನಿತ ಸಂಸ್ಥೆಗಳು 03

ಅನುದಾನ ರಹಿತ ಇಲ್ಲ

ಇ) ಕಳೆದ ಐದು ವರ್ಷಗಳಲ್ಲಿ ತರಬೇತಿ ಪಡೆದ ಒಟ್ಟು ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಸಂಖ್ಯೆ 380

ಇತರೆ ಶಿಕ್ಷಣಾರ್ಥಿಗಳ ಸಂಖ್ಯೆ 70

ವಿವರಗಳು ಕೆಳಗಿನಂತಿವೆ :

	ಕ್ಯಾಡಿಟೋನಿಯ ಶಿ.ತ. ಸಂಸ್ಥೆ ಕಿನ್ನಿಕಾಂಬ್ಲ		ಸೆಂಟ್ ಆನ್ಸ್ ಶಿ.ಸ.ಸಂ ಮಂಗಳೂರು		ರೋಜಾ ಮಿಸ್ಟಿಕ್ ಶಿ.ತ.ಸಂ. ಮಂಗಳೂರು	
	ಅಲ್ಪ ಸಂಖ್ಯಾತರು	ಇತರೆ	ಅಲ್ಪ ಸಂ	ಇತರೆ	ಅಲ್ಪ ಸಂ	ಇತರೆ
1990-91	30	-	21	09	25	05
1991-92	28	02	23	07	26	04
1992-93	28	02	19	11	20	10
1993-94	30	-	22	08	30	-
1994-95	29	01	24	06	25	05

ಈ) ಟಿ.ಸಿ.ಹೆಚ್.ಗೆ ಸಂಬಂಧಿಸಿದಂತೆ ಏಕರೂಪ ದಾಖಲಾತಿ ನಿಯಮಗಳನ್ನು 1995-96ನೇ ಸಾಲಿನಿಂದ ಜಾರಿಗೊಳಿಸಲಾಗಿದ್ದು ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯದಲ್ಲಿ ಆದೇಶಗಳಾವುವು ಇರುವುದಿಲ್ಲ. ಆದರೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಇದ್ದು ಇನ್ನೂ ಇತ್ಯರ್ಥವಾಗಿರುವುದಿಲ್ಲ.

ಉ) ಪ್ರಶ್ನೆ 'ಈ'ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.